ಓ.ಎಸ್. ನಂ.75/2013
ಡಿಡಬ್ಲು-1

ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಮುತ್ತಕೋಡ ಗ್ರಾಮದಲ್ಲಿ ಜನಿಸಿರುತ್ತೇನೆ. ಮುತ್ತಕೋಡ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಕಚೇರಿ ಇದೆ. ಮುತ್ತಕೋಡ ಗ್ರಾಮ ಪಂಚಾಯತಿಯಿಂದ ನಾನು ಗುರಪ್ಪ ಮಗನೆಂದು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ತಹಶೀಲ ಕಚೇರಿಯಿಂದ ಪಡೆದ ವಂಶಾವಳಿಯನ್ನು ಹಾಜರುಪಡಿಸಿರುತ್ತೇನೆ. ನಾನು ಗುರಪ್ಪನ ಮಗನಲ್ಲ ಆದರೆ ನಾನು ವೀರಭದ್ರಪ್ಪನ ಮಗ ಎಂದರೆ ಸರಿಯಲ್ಲ. ನಾನು ಆಧಾರ ಕಾರ್ಡನ್ನು ಮತ್ತು ಚುನಾವಣೆ ಗುರುತಿನ ಚೀಟಿಯನ್ನು ಖೊಟ್ಟಿ ರೀತಿಯಿಂದ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-76 ರಲ್ಲಿ ಚುನಾವಣೆ ಗುರುತಿನ ಚೀಟಿಯಿದ್ದು ಅದರಲ್ಲಿ ವೀರಭದ್ರಪ್ಪರವರ ಭಾವಚಿತ್ರ ಇರುತ್ತದೆ ಎಂದರೆ ಸರಿ. ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮರವರಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮ ಯಾವ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮ ಓದಲು ಬರೆಯಲು ಬರುವುದಿಲ್ಲ ಆದರೆ ಅವರಿಗೆ ಓದಲು ಬರೆಯಲು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮರವರನ್ನು ನೊಂದಣಿ ಕಚೇರಿಯಲ್ಲಿ ನಿಪಿ-42 ನ್ನು ಬರೆದುಕೊಡುವ ಸಮಯದಲ್ಲಿ ಅವರನ್ನು ಯಾರು ಗುರುತಿಸಿರುತ್ತಾರೆ ಎಂದರೆ ಸಾಕ್ಷಿ ಭೀಮಾಶಂಕರಪ್ಪರವರ ತಂದೆಯವರು ಗುರುತಿಸಿರುತ್ತಾರೆ ಎಂದು ಹೇಳುತ್ತಾರೆ. ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮರವರು ನಿಪಿ-42 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಶಿರಸಮ್ಮ, ಸರಸ್ವತಿ ಮತ್ತು ಈಶ್ವರಮ್ಮರವರಿಗೆ 04-ಎಕರೆ ಜಮೀನು ಕೊಡುತ್ತೇನೆ ಎಂದು ಸುಳ್ಳು ಮೋಸದಿಂದ ನಿಪಿ-42 ನ್ನು ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-42 ನ್ನು ಬರೆಯುವ ಮೊದಲು 02-ದಿನಗಳ ಹಿಂದೆ ವ್ಯವಹಾರದ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆ ಸಮಯದಲ್ಲಿ ಬಾಬು ಪಾಟೀಲ ಮತ್ತು ಬಾಪುಗೌಡ ಮಾಲಪಾಟೀಲರವರು ಭಾಗಿಯಾಗಿರುತ್ತದೆ. ನಿಪಿ-42 ರ ಮಾತಕತೆಯಲ್ಲಿ ಶಿರಸಮ್ಮರವರ ಗಂಡನಾದ ಮಹಾದೇವರವರು ಹಾಜರು ಇರಲಿಲ್ಲ. ನಿಪಿ-42 ರ ಮಾತಕತೆಯಲ್ಲಿ ಈಶ್ವರಮ್ಮಳ ಗಂಡನಾದ ಗಂಗಪ್ಪರವರು ಹಾಜರು ಇರಲಿಲ್ಲ. ನಿಪಿ-42 ರ ಮಾತುಕತೆಯಾದ ಮತ್ತು ಅದರ ಸಾರಾಂಶವನ್ನು ಯಾವುದಾದರೂ ಕಚ್ಚಾ ಟಿಪ್ಪಣೆ ಮಾಡಿರುವುದಿಲ್ಲ. 2009 ರಲ್ಲಿ

ಮುತ್ತಕೋಡ ಗ್ರಾಮದಲ್ಲಿ ಜಮೀನು ಬೆಲೆ ಎಷ್ಟು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾಸ್ತಿಗಳು ನೀರಾವರಿ ಜಮೀನುಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ಭಾವಿಗಳು ಇರುತ್ತಾವೆ ಎಂದರೆ ನಾನು ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. 2009 ರಲ್ಲಿ ಮುತ್ತಕೋಡ ಜಮೀನುಗಳಿಗೆ ಪ್ರತಿ ಎಕರೆಗೆ 8-9 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ.

ವಾದಿಯರ ಮದುವೆಯನ್ನು ನಾನು ಮಾಡಿಲ್ಲ ಆದರೆ ಅವರ ದೊಡ್ಡಪ್ಪರವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿರಸಮ್ಮ ಮತ್ತು ಸರಸ್ವತಿರವರಿಗೆ ಒಂದು ಲಕ್ಷ ಹಣ ನೀಡಿದ ಬಗ್ಗೆ ರಸೀದಿಯನ್ನು ಬರೆದುಕೊಂಡಿರುವುದಿಲ್ಲ. ಶಿರಸಮ್ಮ ಮತ್ತು ಸರಸ್ವತಿರವರಿಗೆ ತಲಾ ಒಂದು ಲಕ್ಷ ಹಣವನ್ನು ನನ್ನ ಮನೆಯಿಂದ ತೆಗೆದುಕೊಂಡು ಬಂದು ಕೊಟ್ಟಿರುತ್ತೇನೆ. 3ನೆ ವಾದಿಗೆ ಎರಡು ತೊಲೆ ಬಂಗಾರ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೆ ವಾದಿಗೆ ಎರಡು ತೊಲೆ ಬಂಗಾರ ಕೊಟ್ಟ ಬಗ್ಗೆ ಯಾವುದೆ ರಸೀದಿ ಇರುವುದಿಲ್ಲ. ವಾದಿಯರಿಗೆ ತಲಾ ಒಂದು ಲಕ್ಷ ಹಣ ಮತ್ತು ಎರಡು ತೊಲೆ ಬಂಗಾರ ಕೊಟ್ಟು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾಸ್ತಿಯಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ನಿಪಿ-42 ನ್ನು ನಮ್ಮ ಊರಿನವರು ಬರೆದಿರುತ್ತಾರೆ. ನಿಪಿ-42 ನ್ನು ಬರೆಯಲು ಶಿರಸಮ್ಮರವರೆ ಮಾಹಿತಿ ನೀಡಿರುತ್ತಾರೆ. ವಾದಿಯರಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ